# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ :- 15/05/2021 ರಂದು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ 32 ಕಾವಲ್‌ಭೈರಸಂದ್ರ ವಾರ್ಡ್ ಸಮಿತಿ ಸಭೆಯ ನಡುವಳಿ

ಸಭೆಗೆ ಹಾಜರಿದ್ದ ಅಧಿಕಾರಿಗಳು :-

- ಶ್ರೀ. ಕೊಟ್ರೇಶ್, ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ-32.
- ಶ್ರೀ. ಬಸವರಾಜು, ವಾರ್ಡ್ ಸಹಾಯಕ ಅಭಿಯಂತರರು ವಾರ್ಡ್ ಸದಸ್ಯ ಕಾರ್ಯದರ್ಶಿ
- ಶ್ರೀ. ಅಕ್ಕಮ್ಮ, ಎಲೆಕ್ಟ್ರಿಕಲ್ ಇಂಜಿನೀಯರ್ ಬೆಸ್ಕಾಮಂ
- ಶ್ರೀ. ವೇಣುಗೋಪಾಲ ಕಂದಾಯ ನೀರೀಕ್ಷಕರು.
- ಶ್ರೀ. ಸಿ.ಎಮ್ ವೆಂಕಟೇಶ್, ತೋಟಗಾರಿಕೆ ನೀರೀಕ್ಷಕರು
- ಶ್ರೀ. ದಯಾನಂದ, ಕಿರಿಯ ಆರೋಗ್ಯ ಪರೀವಿಕ್ಷಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯ ಕಾರ್ಯದರ್ಶಿ ವಾರ್ಡ್-32 ರವರು ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ವಾರ್ಡ್-32 ರ ವಾರ್ಡ್ ಸಮಿತಿ ಸಭೆಯನ್ನು ಎಲ್. ಆರ್. ಬಂಡೆ ವಾರ್ಡ್ ಕಛೇರಿಯಲ್ಲಿ ನಡೆಸಲಾಯಿತು. ಸದಸ್ಯ ಕಾರ್ಯದರ್ಶಿರವರು ಸಭೆಯಲ್ಲಿ ಕಾರ್ಯಸೂಚಿಗಳು ಹಾಗೂ ಸಾರ್ವಜನಿಕರ ಕುಂದು ಕೊರತೆಗಳು ಅಧಿಕಾರಿಗಳ ಜೋತೆಯಲ್ಲಿ ಚರ್ಚಿಸಿದರು. ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳವ ಬಗ್ಗೆ ಸಂಬಂದಪಟ್ಟ ಅಧಿಕಾರಿ ಹಾಗೂ ನೌಕರರುಗಳಿಗೆ ತಿಳಿಸಿರುತ್ತಾರೆ.

ವಾರ್ಡ್‌ನ ಅಧಿಕಾರಿಗಳ ಜೋತೆಯಲ್ಲಿ ಚರ್ಚಿಸಿದರು ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳವ ಬಗ್ಗೆ ಸಂಬಂದಪಟ್ಟ ಅಧಿಕಾರಿ ಹಾಗೂ ನೌಕರರುಗಳಿಗೆ ಈ ಕೆಳಕಂಡತೆ ತಿಳಿಸಲಾಗಿರುತ್ತದೆ.

1. ವಾರ್ಡ್ ವ್ಯಾಪ್ತಿಯ ಸಾರ್ವಜನಿಕರ ಸ್ಥಳಗಳಲ್ಲಿ ಕನಿಷ್ಠ 2 ಮೀಟರ್ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಹಾಗೂ ಕಡ್ಡಾಯವಾಗಿ ಪಾಲಿಸಲು ಕೋರಲಾಯಿತ್ತು.
2. ವಾರ್ಡ್ ವ್ಯಾಪ್ತಿಯಲ್ಲಿರುವ ವಲಸೆ, ಕೂಲಿ ಕಾರ್ಮಿಕರು, ಬಡವರಿಗೆ ಹಾಗೂ ಇತರೆ ಅಗತ್ಯವಿರುವ ನಿರ್ಗತಿಕ ಜನರಿಗೆ ಊಟ-ತಿಂಡಿ, ಆಹಾರ ಸಾಮಗ್ರಿಗಳನ್ನು ಒದಗಿಸಲು ಕೋರಲಾಯಿತ್ತು.
3. ವಾರ್ಡ್ ವ್ಯಾಪ್ತಿಯ ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ್ ಮತ್ತು ಸ್ಯಾನಿಟೈಸರ್ ಉಪಯೋಗಿಸುವಂತೆ ಸೂಚಿಸಲು ಕೋರಲಾಯಿತ್ತು.
4. ವಾರ್ಡ್ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ತ್ಯಾಜ್ಯ ನಿರ್ವಹಣೆ ಮಾಡಲು ಕೋರಲಾಯಿತ್ತು.
5. ವಾರ್ಡ್ ವ್ಯಾಪ್ತಿಯಲ್ಲಿ ಸೋಂಕು ನಿವಾರಕ ಔಷಧಿಯನ್ನು ಸಿಂಪಡಣೆ ಮಾಡಲು ಕೋರಲಾಯಿತ್ತು.

6. ಲಾಕ್‌ಡೌನ್ ಸಮಯದಲ್ಲಿ ರಾಜ್ಯ ಸರ್ಕಾರದ ನಿರ್ದೇಶಿಸಿರುವಂತೆ ದಿನ ನಿತ್ಯ ಅಗತ್ಯ ವಸ್ತುಗಳು ವೈದ್ಯಕೀಯ ಮತ್ತು ಆಸ್ಪತ್ರೆ ಹೊರತುಪಡಿಸಿ ಎಲ್ಲಾ ಅಂಗಡಿ ಮುಂಗಟ್ಟುಗಳು ಬೆಳ್ಳಗೆ 6:00 ರಿಂದ 10:00 ರವರೆಗೆ ಶರತ್ತು ಬದ್ದವಾಗಿ ಕಾರ್ಯನಿರ್ವಹಿಸುವಂತೆ ಸೂಚಿಸಲು ಕೋರಲಾಯಿತ್ತು.

7. ವಾರ್ಡ್ ವ್ಯಾಪ್ತಿಯಲ್ಲಿ ಜನಸಂದಣೆ/ಗುಂಪು ಸೇರದಂತೆ ಕ್ರಮವಹಿಸಲು ಕೋರಲಾಯಿತ್ತು.

8. ಸರ್ಕಾರ ಹಾಗೂ ಬಿಬಿಎಂಪಿ ವತಿಯಿಂದ ಕರೋನಾ ವೈರಸ್ (ಕೋವಿಡ್-19) ಸಂಬಂಧ ಜಾರಿಯಲ್ಲಿರುವ ಹಾಗೂ ಮುಂದೆ ನೀಡಬಹುದಾದ ಎಲ್ಲಾ ನಿಯಮಗಳನ್ನು ತಪ್ಪದೇ ಪಾಲಿಸಲು ಹಾಗೂ ಎಲ್ಲಾ ಸೂಚನೆ ಮತ್ತು ಆದೇಶಗಳನ್ನು ಮೀರದಂತೆ ಕೋರಲಾಯಿತು

9. ಸಾರ್ವಜನಿಕರಲ್ಲಿ ಸೊಂಕಿನ ಬಗ್ಗೆ ಹಾಗೂ ಸೋಂಕಿನ ಲಕ್ಷಣಗಳು ಕಂಡುಬಂದಲ್ಲಿ ಯಾವುದೇ ಭಯವಿಲ್ಲದೆ ಚಿಕಿತ್ಸೆ ಪಡೆಯುವುದರ ಬಗ್ಗೆ ಅರಿವು ಮೂಡಿಸುವುದು.

10. ಪುಲಿಕೇಶಿನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸ್ಥಾಪಿಸಿರುವ ಕೋವಿಡ್ ಕೇರ್ ಸೆಂಟರ್ ಬಗ್ಗೆ ಅರಿವು ಮೂಡಿಸುವ ಬಗ್ಗೆ ಕ್ರಮ ಕೈಗೊಳ್ಳುವುದು.

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಭೆಗೆ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆ.

15/5/21

ನೋಡಲ್ ಅಧಿಕಾರಿ/ ಸದಸ್ಯ ಕಾರ್ಯದರ್ಶಿ
ವಾರ್ಡ್-32

**ಪ್ರತಿಗಳನ್ನು:**

- ಮಾನ್ಯ ಆಡಳಿತಾಧಿಕಾರಿರವರ ಆಪ್ತ ಶಾಖಗೆ ಸಲ್ಲಿಸಿ ಆಡಳಿತಾಧಿಕಾರಿರವರ ಗಮನಕ್ಕೆ ತರಲು ಕೊರಿದೆ.
- ಮಾನ್ಯ ಆಯುಕ್ತರುರವರ ಆಪ್ತಶಾಖೆಗೆ ಸಲ್ಲಿಸಿ ಆಯುಕ್ತರವರ ಗಮನಕ್ಕೆ ತರಲು ಕೊರಿದೆ
- ಮಾನ್ಯ ವಲಯ ಆಯುಕ್ತರುರವರ ಆಪ್ತಶಾಖೆಗೆ ಸಲ್ಲಿಸಿ ಆಯುಕ್ತರವರ ಗಮನಕ್ಕೆ ತರಲು ಕೊರಿದೆ.
- ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಅಪ್ತಶಾಖೆಗೆ ಸಲ್ಲಿಸಿ ಅಯುಕ್ತರವರ ಗಮನಕ್ಕೆ ತರಲು ಕೊರಿದೆ.
- ಮುಖ್ಯ ಅಭೀಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ-ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಪುಲಕೇಶಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ. ಹಳ್ಳಿ) ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಕಛೇರಿ ಪ್ರತಿ.